ಆ) ಮತ್ತು ಇ) ಪ್ರಸ್ತಾವನೆ ಬಂದಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ವಾಪಸಂದ್ರ ಗ್ರಾಮಕ್ಕೆ ಹೊಸ ಸರ್ಕಾರಿ (ಬಾಲಕಿಯರ) ಪ್ರೌಢಶಾಲೆ ಮಂಜೂರಾತಿಗಾಗಿ ಪ್ರಸ್ತಾವನೆ ಬಂದಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ದಿನಾಂಕ: 29–06–2006ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 73 ಎಸ್‌ಎಚ್‌ಎಸ್ 2006(2) 2006ರನ್ವಯ ಮಂಡೀಕಲ್ ಗ್ರಾಮಕ್ಕೆ 2006–07ನೇ ಸಾಲಿನಿಂದ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಊ) ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸದರಿ ಹುದ್ದೆಗಳನ್ನು ವರ್ಗಾವಣೆಯಿಂದ ತುಂಬಲಾಗಿದೆ. ಹೆಚ್ಚುವರಿ ಉಪನ್ಯಾಸಕರ ಹುದ್ದೆಗೆ ಬೇಡಿಕೆ ಬಂದಿದ್ದು, ಮಂಜೂರಾತಿ ನೀಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಕೊಠಡಿಗಳ ಕೊರತೆ ಬಗ್ಗೆ ಯಾವುದೇ ಬೇಡಿಕೆ ಬಂದಿರುವುದಿಲ್ಲ.

ಋ) ಕ್ರಮ ಸಂಖ್ಯೆ: 06ಕ್ಕೆ ನೀಡಿರುವ ಉತ್ತರ ಇದಕ್ಕೆ ಅನ್ವಯಿಸುತ್ತದೆ.

847 (544) ಶ್ರೀ ನಾಗರಾಜು ಎಂ.ಟಿ.ಬಿ. (ಹೊಸಕೋಟೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2006–07ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ 8 ತಾಲ್ಲೂಕುಗಳಿಗೆ ತಾಲ್ಲೂಕುವಾರು ಮಂಜೂರಾಗಿರುವ ಹೆಚ್ಚುವರಿ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು;

ಆ) ಈ ತಾಲ್ಲೂಕುಗಳಿಗೆ ಹೆಚ್ಚುವರಿ ಶಾಲಾ ಕೊಠಡಿಗಳನ್ನು ಯಾವ ಆಧಾರದ ಮೇಲೆ ಮಂಜೂರು ಮಾಡಲಾಗಿದೆ.

ಇ) ಜಿಲ್ಲೆಯ ಕೆಲವು ತಾಲ್ಲೂಕುಗಳಿಗೆ ಹೆಚ್ಚಿನ ಕೊಠಡಿಗಳನ್ನು ಮಂಜೂರು ಮಾಡಿ ತಾರತಮ್ಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 2006–07ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ 8 ತಾಲ್ಲೂಕುಗಳಿಗೆ ಸರ್ವ ಶಿಕ್ಷಾ ಅಭಿಯಾನದಡಿ ಪ್ರಾಥಮಿಕ ಶಾಲೆಗಳಿಗೆ ಮಂಜೂರಾಗಿರುವ ಹೆಚ್ಚುವರಿ ಶಾಲಾ ಕೊಠಡಿಗಳ ಸಂಖ್ಯೆ 196 ಪ್ರೌಢಶಾಲೆಗೆ ಮಂಜೂರಾಗಿರುವ ಕೊಠಡಿಗಳ ಸಂಖ್ಯೆ (ರಾಜ್ಯ ಯೋಜನೆಯಡಿ) 10 (ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.)

ಆ) ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹಾಗೂ ಶಾಲಾ ಕೊಠಡಿಗಳ ಕೊರತೆಯ ಆಧಾರದ ಮೇಲೆ ಹೆಚ್ಚುವರಿ ಕೊಠಡಿಗಳನ್ನು ಮಂಜೂರು ಮಾಡಲಾಗಿದೆ.

ಇ) <u>ಜಿಲ್ಲೆಯಲ್ಲಿನ ಒಟ್ಟು ಶಾಲೆಗಳ ಸಂಖ್ಯೆ x ತಾಲ್ಲೂಕಿನಲ್ಲಿರುವ ಶಾಲೆಗಳ ಸಂಖ್ಯೆ ಮಂಜೂರಾಗಿರುವ ಹೆಚ್ಚುವರಿ ಕೊಠಡಿಗಳ ಸಂಖ್ಯೆ</u>

ಈ ಸೂತ್ರದಂತೆ ಸರ್ವ ಶಿಕ್ಷಾ ಅಭಿಯಾನದಡಿ ಹಂಚಿಕೆ ಮಾಡಿರುವುದರಿಂದ ಯಾವುದೇ ತಾರತಮ್ಯ ಮಾಡಿರುವುದಿಲ್ಲ. ಪ್ರೌಢಶಾಲಾ ಕೊಠಡಿಗಳನ್ನು ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಮಂಜೂರು ಮಾಡಲಾಗಿದೆ.

ವಿಧಾನಸಭಾ ಪ್ರಶ್ನೆ ಸಂಖ್ಯೆ 544ಕ್ಕೆ ಅನುಬಂಧ

ಕ್ರಮ ಸಂಖ್ಯೆ	ತಾಲ್ಲೂಕು	ಮಂಜೂರಾದ ಹೆಚ್ಚುವರಿ	
		ಪ್ರಾಥಮಿಕ ಶಾಲೆಗಳು (ಎಸ್.ಎಸ್.ಎ. ಅಡಿ)	ಪ್ರೌಢಶಾಲಾ ಕೊಠಡಿಗಳು (ರಾಜ್ಯ ಯೋಜನೆಯಡಿ)
01.	ಚನ್ನಪಟ್ಟಣ	19	–
02.	ದೇವನಹಳ್ಳಿ	17	5
03.	ದೊಡ್ಡಬಳ್ಳಾಪುರ	28	–
04.	ಹೊಸಕೋಟೆ	21	5
05.	ಕನಕಪುರ	33	–
06.	ಮಾಗಡಿ	32	–
07.	ನೆಲಮಂಗಲ	23	–
08.	ರಾಮನಗರ	23	–
	ಒಟ್ಟು	**196**	**10**

848 (1045) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2005–06ನೇ ಸಾಲಿನಲ್ಲಿ ರಾಜೀವ್ ಗಾಂಧಿ ವಸತಿ ಯೋಜನೆ ಅಡಿಯಲ್ಲಿ ಮನೆಗಳನ್ನು ಮಂಜೂರಾತಿ ನೀಡಿ ಫಲಾನುಭವಿಗಳನ್ನು ಗುರುತಿಸಿದ್ದು ಈ ವರೆವಿಗೂ ಹಣ ಬಿಡುಗಡೆ ಮಾಡದಿರಲು ಕಾರಣವೇನು;

ಆ) ಬಿಡುಗಡೆ ಮಾಡಲು ಸರ್ಕಾರದಲ್ಲಿ ಹಣವಿಲ್ಲವೆ; ಹಾಗಿಲ್ಲದಿದ್ದಲ್ಲಿ, ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಡಿ. ಬಿ. ಜಯಕುಮಾರ್ (ವಸತಿ ಸಚಿವರು):

ಅ) ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದಂತೆ 2005–06ನೇ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ 40